ಅಸಲು ದಾವೆ ನಂಃ 32/2018 ಪಿ.ಡಬ್ಲ್ಯೂ1- ಹಾಲಪ್ಪ ನಾಡಗೌಡ್ರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 20-07-2022 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ. ಪಿ. ಕೆ. ಯು. ವಕೀಲರಿಂದಃ**

1. ದಾವಾ ಆಸ್ತಿ ವಿ.ಪಿ.ಸಿ. ನಂ. 31 ಮೂಲತಃ ನನ್ನ ತಂದೆ ಶಂಕ್ರಪ್ಪ ನಾಡಗೌಡ ಇವರಿಗೆ ಸೇರಿದ್ದು. ನನ್ನ ತಂದೆ ನಾನು 9 ವರ್ಷ ವಯಸ್ಸಿನವಾನಾಗಿದ್ದಾಗ ಇದ್ದಾಗ ತೀರಿಕೊಂಡರು. ತಾರೀಖು ನನಗೆ ನೆನಪಿಲ್ಲ. ಅವರು ತೀರಿಕೊಂಡ ನಂತರ ದಾವಾ ಆಸ್ತಿಗೆ ನಾನೇ ಮಾಲೀಕ ಆಗಿದ್ದೇನೆ ಎಂದರೆ ನಿಜ. ನನ್ನ ತಂದೆ ತೀರಿಕೊಂಡ ನಂತರ ನನ್ನ ಹೆಸರು ದಾವಾ ಆಸ್ತಿಯ ಉತಾರದಲ್ಲಿ ನಮೂದು ಆಗಿತ್ತು ಎಂದರೆ ಸರಿ ಅಲ್ಲ. ನನ್ನ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಿಪಿಃ 5 ರಲ್ಲಿ ನನ್ನ ಹೆಸರು ದಾಖಲಾಗಿತ್ತು ಎಂದರೆ ಸರಿ ಅಲ್ಲ. ನಾನು ಉದ್ದೇಶಪೂರ್ವಕವಾಗಿ ಆ ರೀತಿ ದಾಖಲು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಾನು ಈಗ ಕುಕನೂರನಲ್ಲಿ ವಾಸವಾಗಿದ್ದೇನೆ. 1974 ರಲ್ಲಿ ನನಗೇ ಅಂದಾಜು 28 -29 ವರ್ಷ ವಯಸ್ಸು ಆಗಿತ್ತು ಎಂದರೆ ಸಾಕ್ಷಿ ಆಗಿರಬಹುದು ಎಂದು ಹೇಳುತ್ತಾರೆ. ನಾನು ಆ ಮುಂಚೆ ಕೌಜಗೇರಿ ಗ್ರಾಮದಲ್ಲಿ ವಾಸವಾಗಿದ್ದ ಎಂದರೆ ಸರಿ ಅಲ್ಲ. ನಾನು ಯಾವತ್ತೂ ಚಿಕ್ಕಮಣ್ಣೂರ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ನಿಜ. ನಾನು ಬೇರೆ ಊರಿನಲ್ಲಿ ವಾಸವಾಗಿದ್ದ ಕಾರಣ 1974 ರಲ್ಲಿ ನಾನು ಈ ಆಸ್ತಿಯನ್ನು ಖರೀದಿಗೆ ಹಚ್ಚಿದೆ ಎಂದರೆ ಸರಿ ಅಲ್ಲ. ನಾನು ದಿಃ 26-03-1974 ರಂದು ರೂ.1,000/- ಗಳಿಗೆ 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೆ ಎಂದರೆ ಸರಿ ಅಲ್ಲ. ಆ ಪ್ರಕಾರ ಸಬ್ ರಿಜಸ್ಟರ ಕಚೇರಿಯಲ್ಲಿ ನೋಂದಾಯಿತ ಖರೀದಿ ಪತ್ರ ಬರೆದುಕೊಟ್ಟಿದ್ದೆ ಎಂದರೆ ಸರಿ ಅಲ್ಲ. ಆಗಿನಿಂದ ಇಲ್ಲಿಯವರೆಗೆ ದಾವಾ ಆಸ್ತಿ 1 ನೇ ಪ್ರತಿವಾದಿಯ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ಸರಿ ಅಲ್ಲ. ಖರೀದಿ ಪತ್ರ ದ ಅನ್ವಯ 1 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಗೆ ದಾಖಲು ಆಗಿದೆ ಎಂದರೆ ಸರಿ ಅಲ್ಲ. ನಿಪಿಃ 4 ರಿಂದ 11 ನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿ ಅಲ್ಲ. 1974 ರಿಂದ ಇಲ್ಲಿಯವರೆಗೆ 1 ನೇ ಪ್ರತಿವಾದಿಯ ಹೆಸರು ನಿಪಿಃ 4 ರಿಂದ 11 ರಲ್ಲಿ ದಾಖಲು ಆಗಿದೆ ಎಂದರೆ ಸರಿ ಅಲ್ಲ.

2. 1 ನೇ ಪ್ರತಿವಾದಿಯ ಆಸ್ತಿಯನ್ನು ಖರೀದಿ ಹಿಡಿದಿದ್ದಾಗ ಅಲ್ಲಿ ಹಳೆ ಮನೆ ಇತ್ತು ಎಂದರೆ ಸಾಕ್ಷಿ ನಾನು ಹೋಗಿದ್ದೆ, ಅಲ್ಲಿ ಮನೆ ಬಿದ್ದಿತ್ತು ಎಂದು ಹೇಳುತ್ತಾರೆ. ನಾನು ದಾವಾ ಆಸ್ತಿಯ ಹತ್ತಿರ ಯಾವಾಗ ಹೋಗಿದ್ದೆ ಎಂದು ತಾರೀಖು , ತಿಂಗಳು ವರ್ಷ ಹೇಳಲು ಬರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರು ಅಣ್ಣ-ತಮ್ಮಂದಿರು ಎಂದರೆ ನಿಜ. 2018 ರಲ್ಲಿ ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ರೂ.2,00,000/- ರಿಂದ ರೂ.3,00,000/- ಖರ್ಚು ಮಾಡಿ ಹೊಸದಾಗಿ ಮನೆ ಕಟ್ಟಿಸಿದ್ದಾನೆ ಎಂದರೆ ಸರಿ ಅಲ್ಲ. ನಾನು ಅದನ್ನು ಸಹಿಸಲಾಗದೇ , ಪ್ರತಿವಾದಿಯರ ವಿರುದ್ಧ ಈಗ ಸುಳ್ಳು ಕೇಸು ಮಾಡಿದ್ದೇನೆ ಎಂದರೆ ಸರಿ ಅಲ್ಲ. 1974 ರಿಂದ ಇಲ್ಲಿಯವರೆಗೆ ಆ ಖರೀದಿ ಪತ್ರವನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ಸಾಕ್ಷಿ ಮುಂದುವರೆದು ನಾನು ಪ್ರತಿವಾದಿಗಳಿಗೆ ಆಗಲೇ ಕೇಳಿದ್ದೆ , ಅವರು ಹೊಡೆ ಬಡಿ ಮಾಡಿ , ಊರಿನಿಂದ ಹೊರಗೆ ಹಾಕಿ, ದೌರ್ಜನ್ಯ ಮಾಡಿದರು ಎಂದು ಹೇಳುತ್ತಾರೆ. ಯಾವ ತಾರೀಖುನಂದು ಪ್ರತಿವಾದಿಗೆ ಕೇಳಿದ್ದೆ ಎಂದು ನನಗೆ ನೆನಪಿಲ್ಲ. ನಾನು ನಿಪಿಃ 4 ರಿಂದ 11 ಪಂಚಾಯತಿ ದಾಖಲೆಗಳನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ.

3. ನಾನು ನಿಪಿಃ 12 ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು 2017 ರಲ್ಲಿ ಚಿಕ್ಕ ಮಣ್ಣೂರು ಗ್ರಾಮ ಪಂಚಾಯತಿಗೆ ಹೋಗಿದ್ದ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿಲ್ಲ. ನಿಪಿಃ 1 ರಿಂದ 3 ಋುಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಯಾರು ಸಲ್ಲಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ನಿಪಿಃ 1 ರಿಂದ 3 ದಾಖಲೆಗಳನ್ನು ಪಡೆದುಕೊಂಡಿಲ್ಲ. ನಾನು 1974 ರಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ಪ್ರತಿವಾದಿಯರೇ ಕಬ್ಜಾ ಮತ್ತು ಮಾಲ್ಕೀ ಹೊಂದಿದ್ದಾರೆ ಎಂದರೆ ಸರಿ ಅಲ್ಲ. 1974 ರಲ್ಲಿಯೇ ನಾನು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ಹಕ್ಕು ವ ಹಿತಾಸಕ್ತಿ ಇಲ್ಲ ಎಂದರೆ ಸರಿ ಅಲ್ಲ. ನಾನು 1 ನೇ ಪ್ರತಿವಾದಿಯಿಂದ ರೂ.1,000/- ಸಾಕ್ಷಿಗಳ ಸಮಕ್ಷಮ ಪಡೆದುಕೊಂಡು ದಾವಾ ಆಸ್ತಿಯನ್ನು ದಿಃ 26-03-1974 ರಂದು ಬರೆಸಿಕೊಟ್ಟಿದ್ದೇನೆ ಎಂದರೆ ಸರಿ ಅಲ್ಲ. ನಾನು ಸದರಿ ಪತ್ರವನ್ನು ಸಬ್ ರಿಜಸ್ಟರ ಸಮಕ್ಷಮ ನೋಂದು ಮಾಡಿಸಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್)**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**